ಸಿಸಿ ನಂಃ 1789/2021

ಸಿ.ಡಬ್ಲೂ 22/ಪಿ.ಡಬ್ಲೂ 8

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ** 1789/2021

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸಿದ್ದಪ್ಪ ಚವಾಣ್ಣ |
| ತಂದೆಯ ಹೆಸರು | ಃ | ಲಾಲಪ್ಪ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ಎಚ್ ಸಿ 1169 |
| ವಾಸ ಸ್ಥಳ | ಃ | ಉಪ್ಪಾರ ಪೇಟೆ ಪೊಲೀಸ ಠಾಣೆ ಬೆಂಗಳೂರು |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 19-10-2024**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು 2012 ರಿಂದ 2021 ಅಗಸ್ಟ ವರೆಗೆ ಕೆಪಿ ಅಗ್ರಹಾರ ಪೊಲೀಸ ಠಾಣೆಯಲ್ಲಿ ಪಿಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿನಾಂಕ 02-12-2021 ರಂದು ಮಾಗಡಿ ರೋಡ ಪೊಲೀಸ ಠಾಣೆಯ ಅಪರಾದ ಸಂ.158/2020 ರಲ್ಲಿ 1 ನೇ ಆರೋಪಿತನನ್ನು ಬಾಡಿ ವಾರಾಂಟ ಮೇಲೆ ಪಡೆದುಕೊಂಡು ಆತನನ್ನು ವಿಚಾರಿಸಿದಾಗ ಆತ ಬೆಂಗಳೂರು ಮತ್ತು ಬೇರೆ ಬೇರೆ ಕಡೆ ಸರ ಗಳ್ಳ ತನ ಮಾಡಿರುತ್ತೆನೆ ಎಂದು ಮಾಹಿತಿ ತಿಳಿಸಿರುತ್ತಾನೆ. ಆರೋಪಿತರನ್ನು ಪತ್ತೆಮಾಡಲು ನಮ್ಮ ಮೆಲಾಧಿಕಾರಿ ನನ್ನನ್ನು ಸೇರಿಸಿ ಒಂದು ತಂಡವನ್ನು ರಚಿಸಿದ್ದರು. ಚಾಸಾ.39, ಪ್ರಭು ಸ್ವಾಮಿ ಪಿಎಸ್ಐ, ಮಹಾದೇವಯ್ಯಾ ಪಿಎಸ್ ಐ, ರವಿಕುಮಾರ ಎ ಎಸ್ ಐ, ಶೀವಣ್ಣ ಎಚ್ ಸಿ, ಕೃಷ್ಣಪ್ಪ ಎಚ್ ಸಿ, ದಿನೇಶ ಎಚ್ ಸಿ, ಬಸವರಾಜಪ್ಪ ಎಚ್ ಸಿ, ಡಬ್ಲೂ ಪಿ ಸಿ ಪ್ರತಿಭಾ, ರಶ್ಮೀ, ಸುರೇಖಾ ಪಾಟಿಲ, ಬೇಬಿ ಆಯಿಶಾ, ಲಕ್ಷ್ಮೀ, ಇದ್ದರು. ಆರೋಪಿತರನ್ನು ಪತ್ತೆ ಮಾಡಲು 1 ನೇ ಆರೋಪಿತ ಸಮೇತ ಖಾಸಗಿ ವಾಹನದಲ್ಲಿ ದಿಃ 10-12-2020 ರಂದು ಧಾರವಾಡಕ್ಕೆ

ಬಂದಿದ್ದೇವು. ಧಾರವಾಡದ ಇರಾನಿ ಕಾಲನಿಯಲ್ಲಿ ಅವುನು ಇರಾನಿ, ಆಜಾದ ಇರಾನಿ, ಬಾನು ಇರಾನಿ, ಗುಲ್ಜಾರ ಬೇಗಂ, ಫಾತಿಮಾ ಅಕ್ತರ ಅವರನ್ನು ಕರೆದುಕೊಂಡು ದಿಃ 11-12-2020 ರಂದು ಠಾಣೆ ಹಾಜರುಪಡಿಸಿರುತ್ತೆವೆ. ಆರೋಪಿತರು ಮಾಡಿದ ಸರಗಳ್ಳತನ ಮತ್ತು ಮುದ್ದೆಮಾಲನ್ನು ಪತ್ತೆ ಮಾಡಲು ವಿಜಯ ನಗರ ಉಪ ವಿಭಾಗದ ಅಫರಾದ ಪತ್ತೆದಳ ಮತ್ತು ವಿಶೇಷ ತಂಡವನ್ನು ನನ್ನನ್ನು ಒಳಗೊಂಡತೆ ರಚಿಸಿದ್ದರು. ಸದರಿ ತಂಡದಲ್ಲಿ ಮೇಲೆ ಹೇಳಿದ ಅಧಿಕಾರಿ ಮತ್ತು ಸಿಬ್ಬಂದಿ ಜೊತೆ ಉಮೇಶ ಎಚ್ ಸಿ, ರುಪೇಶ ಎಚ್ ಸಿ, ಶ್ರೀನಿವಾ ಎಚ್ ಸಿ, ಪಲ್ಲವಿ ಮತ್ತು ಜಯಶ್ರೀ ಪಿಸಿ ಅವರನ್ನು ಸೇರಿಸಿ ವಿಶೇಷ ತಂಡವನ್ನು ನನ್ನನ್ನು ಒಳಗೊಂಡತೆ ರಚಿಸಿದ್ದರು. ಪೊಲೀಸ ಅಭಿ ರಕ್ಷೆಯಲ್ಲಿ ಇದ್ದ ಭಾನು ಇರಾನಿ ಮತ್ತು ಫಾತಿಮಾ ಅಕ್ತರ ಇವರನ್ನು ಕರೆದುಕೊಂಡು ದಿಃ 17-12-2020 ರಂದು ಆರೋಪಿತರು ತೋರಿಸಿದ ಧಾರವಾಡದ ಗಾಂದಿ ಚೈಕಿನಲ್ಲಿರುವ ಬಂಗಾರದ ಅಂಗಡಿಗಳಾದ ಕಾಮಾಕ್ಷಿ ಜುವ್ಯಲರ್ಸ ಅಂಗಡಿಯಲ್ಲಿ 230 ಗ್ರಾಂ ಚಿನ್ನದ ಒಡೆವೆಗಳನ್ನು ದಿಃ19-12-2020 ರಂದು ಅಮಾನತ್ತು ಪಡೆಸಿಕೊಂಡಿರುತ್ತೆವೆ. ದಿಃ 20-12-2020 ರಂದು ಅದೇ ಸರ್ಕಾಲ್ ನಲ್ಲಿರುವ ಗಣಪತಿ ಜುವೆಲರ್ಸ ಒಟ್ಟು 549 ಗ್ರಾಂ ಚಿನ್ನದ ಒಡೆವೆಗಳನ್ನು ಹಾಗೂ ಅದೇ ದಿನ ಕೊಯಿನೂರ್ ಜುವೇಲರ್ಸ ಒಟ್ಟು 99 ಗ್ರಾಂ ಚಿನ್ನದ ಒಡೆವೆಗಳನ್ನು ಅಮಾನತ್ತು ಪಡೆಸಿಕೊಂಡಿರುತ್ತೆವೆ. ದಿಃ21-12-2020 ರಂದು ವರ್ಣ ಸಿಲವರ್ ಜುವೇಲರ್ಸ ನಲ್ಲಿ ಒಟ್ಟು 149 ಗ್ರಾಂ ಅಮಾನತ್ತು ಪಡೆಸಿಕೊಂಡಿರುತ್ತೆವೆ. ಸದರಿ ಅಮಾನತ್ತು ಸಂದರ್ಬದಲ್ಲಿ ನಾನು ಆರೋಪಿತರ ಬೆಂಗಾವಲಾಗಿ ಕರ್ತವ್ಯ ನಿರ್ವಹಿಸಿರುತ್ತೆನೆ. ಆರೋಪಿತನನ್ನು ನೋಡಿದರೆ ಗುರುತಿಸಿತ್ತೆನೆ. ಮತ್ತು ಅಂಗಡಿಗಳನ್ನು ನೋಡಿದರೆ ಗುರುತಿಸುತ್ತೆನೆ. ಈಗ ನೋಡುತ್ತಿರು ಪೋಟೊಗಳನ್ನು ಈಗಾಗಲೇ ನಿ.ಪಿ.11 ಮತ್ತು 12 ಎಂದು ಗುರುತಿಸಲಾಗಿರುತ್ತದೆ. ನ್ಯಾಯಾಲಯದ

ಮುಂದಿರುವ ಆರೋಪಿತರನ್ನು ನೋಡಿದರೆ ಗುರುತಿಸುತ್ತೆನೆ. ಈಗ ನೋಡುತ್ತಿರುವ ಆರೋಪಿತ 1, 2 ಮತ್ತು 4 ಆ ದಿನ ನಾವು ದಸ್ತಗಿರಿ ಮಾಡಿದ ಆರೊಪಿತರು ಆಗಿರುತ್ತಾರೆ.

**ಪಾಟೀಸವಾಲುಃ 1 ನೇ ಆರೋಪಿ ಪರ ವಕೀಲರಿಂದ ಃ**

ದಿಃ 02-12-2020 ರಂದು 1 ನೇ ಆರೋಪಿತನನ್ನು ಬಾಡಿ ವಾರಾಂಟ ಮೇಲೆ ಪಡೆದುಕೊಂಡಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆತನನ್ನು ವಿಚಾರಿಸಿದಾಗ ಆತ ಬೆಂಗಳೂರು ಮತ್ತು ಬೇರೆ ಬೇರೆ ಕಡೆ ಸರ ಗಳ್ಳ ತನ ಮಾಡಿರುತ್ತೆನೆ ಎಂದು ಮಾಹಿತಿ ತಿಳಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಖಾಸಗಿ ವಾಹನದ ಸಂಖ್ಯೆ ಹೇಳಲು ಆಗುವುದಿಲ್ಲ. ಧಾರವಾಡದ 4 ಬಂಗಾರದ ಅಂಗಡಿಯಲ್ಲಿ ಪಂಚನಾಮೆ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಕಾರಣ ನಾವು ಬೆಂಗಾವಲಾಗಿ ಹೋರಗಡೆ ಇದ್ದೇವು. ನಾವು ಧಾರವಾಡಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿ ಅವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಿ.ಪಿ.11 ಮತ್ತು 12 ನನ್ನ ಸಮಕ್ಷಮ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರು 1 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ. ಃ**

**ಪಾಟೀಸವಾಲುಃ 3 ಮತ್ತು 4 ನೇ ಆರೋಪಿ ಪರ ವಕೀಲರಿಂದ ಃ**

ನಾವು ರಾತ್ರಿ 10.00 ಗಂಟೆಗೆ ಧಾರವಾಡಕ್ಕೆ ಬಂದಿರುತ್ತೆವೆ. ಧಾರವಾಡದಲ್ಲಿ ಆರೊಪಿತರನ್ನು ರಾತ್ರಿ 1 ರಿಂದ 1 ವರೆ ಗಂಟೆ ಸಮಯದಲ್ಲಿ ಅವರನ್ನು ಇರಾನಿ ಕಲೋನಿಯಲ್ಲಿ ದಸ್ತಗಿರಿ ಮಾಡಿರುತ್ತೆವೆ. ಧಾರವಾಡದ 2 ನೇ ಬಾರಿ ಸಂಜೆ 6 ರಿಂದ 6.30 ಬಂದಿರುತ್ತೆವೆ. ಆ ದಿನ ನಾವು ಧಾರವಾಡದಲ್ಲಿ ಉಳಿದಕೊಂಡು ಮರು ದಿನ ಕಳುವಿನ ಮಾಲನ್ನು ವಶಪಡಿಸಿಕೊಂಡಿರುತ್ತೆವೆ. ಧಾರವಾಡದ ಗಾಂದಿ ಚೈಕಿನಲ್ಲಿರುವ ಬಂಗಾರದ

ಸಿಸಿ ನಂಃ 1789/2021

ಸಿ.ಡಬ್ಲೂ 22/ಪಿ.ಡಬ್ಲೂ 8

ಅಂಗಡಿಗಳಾದ ಕಾಮಾಕ್ಷಿ ಜುವ್ವಲರ್ಸ ಅಂಗಡಿಗೆ 10.00 ಗಂಟೆಗೆ ಹೋಗಿರುತ್ತೆವೆ. ಆ ಬಗ್ಗೆ ಧಾರವಾಡದ ನಗರ ಪೊಲೀಸ ಠಾಣೆಗೆ ಮಾಹಿತಿ ನೀಡಿದ್ದರು. ಸದರಿ ಪೊಲೀಸ ಠಾಣೆಯಿಂದ ಪೊಲೀಸ ಸಿಬ್ಬಂದಿ ಬಂದಿದ್ದರು ಅವರು ಹೆಸರು ನೇನಪಿರುವುದಿಲ್ಲ. ಸದರಿ ಅಂಗಡಿಯಲ್ಲಿ 1 ರಿಂದ 1 ವರೆ ಗಂಟೆ ಅವಧಿ ಅಲ್ಲಿ ಇದ್ದೇವು. ಅದೇ ಸರ್ಕಾಲ್ ನಲ್ಲಿರುವ ಗಣಪತಿ ಜುವೆಲರ್ಸ ಅಂಗಡಿಗೆ 11.30 ಗಂಟೆಗೆ ಹೋಗಿದ್ದೇವು. ಹಾಗೂ ಅದೇ ದಿನ ಕೊಯಿನೂರ್ ಜುವೇಲರ್ಸ ಅಂಗಡಿಗೆ 1.30 ಗಂಟೆಗೆ ಹೋಗಿದ್ದೇವು. ವರ್ಣ ಸಿಲವರ್ ಜುವೇಲರ್ಸ ನಲ್ಲಿ ಅಂಗಡಿಗೆ 2.45 ರಿಂದ 3.00 ಗಂಟೆಗೆ ಹೋಗಿದ್ದೇವು. ಅಂಗಡಿಗಳಲ್ಲಿ ಒಳಗಡೆ ಏನಾಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪ್ರಕರಣದಲ್ಲಿ ಜಪ್ತಾದ ಮುದ್ದೇಮಾಲಿಗು ಆರೋಪಿತರಿಗು ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮೆಲಾಧಿಕಾರಿ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**3 ಮತ್ತು 4 ನೇ ಆರೋಪಿ ಪರ ವಕೀಲರು 1 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ. ಃ**

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.